quickmarketreports.com

Date : 30-10-2015

# ಚಹಾ ಪುಡಿ ಉತ್ಪಾದನೆ ಇಳಿಕೆ, ರಫ್ತು ಇಳಿಕೆ

ಭಾರತದ ಚಹಾ ಕಂಪೆನಿಗಳು ಉತ್ಪಾದನೆಯಲ್ಲಿ ಇಳಿಕೆ ಹಾಗೂ ದರ ಇಳಿಕೆಯ ಸಮಸ್ಯೆಗಳನ್ನೆದುರಿಸುತ್ತಿವೆ. ಉತ್ತಮ ಗುಣಮಟ್ಟದ ಚಹಾಕ್ಕೆ ಮಾತ್ರ ಹೆಚ್ಚಿನ ದರ ದೊರಕುತ್ತಿದೆ. ಶ್ರೀಲಂಕಾ, ಕೆನ್ಯಾ, ಇಂಡೋನೇಶಿಯಾಗಳ ಪೂರೈಕೆ ಹೆಚ್ಚಿರುವುದರಿಂದ ಕಳೆದ ಕೆಲವು ತಿಂಗಳಿಂದ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ. ಅಗಸ್ಟ್ ಮತ್ತು ಸೆಪ್ಟೆಂಬರ್ 2015ರ ಮಧ್ಯಭಾಗದ ತನಕ ದರ ಕಡಿಮೆಯಾಗಿತ್ತು. ನಂತರ ದರ ಸ್ವಲ್ಪ ಮಟ್ಟಿಗೆ ಗಳಿಕೆ ಕಂಡಿದೆ. ಅಗಸ್ಟ್‌ನಲ್ಲಿ ಚಹಾದ ಗುಣಮಟ್ಟ ಇಳಿಕೆಯಾಗಿದ್ದರಿಂದ ದರ ಇಳಿಕೆಯಾಗಿತೆನ್ನಲಾಗಿದೆ. ವಿಪರೀತ ಮಳೆಯಿಂದ ಚಹಾ ಎಲೆಗಳ ಗುಣಮಟ್ಟದಲ್ಲಿ ಇಳಿಕೆಯಾಗಿತ್ತು.

ಪ್ರತಿಕೂಲ ಹವಾಮಾನದಿಂದಾಗಿ ಹಿಂದಿನ ವರ್ಷ ಉತ್ಪಾದನೆ ಕಡಿಮೆಯಾಗಿದ್ದು ಈ ವರೆಗೆ ಚೇತರಿಕೆ ಕಂಡಿಲ್ಲವೆನ್ನಲಾಗಿದೆ. ಎಪ್ರಿಲ್‌ನಿಂದ ಸೆಪ್ಟೆಂಬರ್ 1, 2015ರ ತನಕದ 5 ತಿಂಗಳ ಉತ್ಪಾದನೆ 625 ಎಂಕೆ.ಜಿ. ಗಳಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 626 ಎಂ.ಕೆ.ಜಿ. ಉತ್ಪಾದನೆಯಾಗಿತ್ತೆನ್ನಲಾಗಿದೆ. ಅಲ್ಲದೆ, ಚಹಾ ಉತ್ಪಾದನಾ ವೆಚ್ಚವೂ ಹೆಚ್ಚಳವಾಗುತ್ತಿದ್ದು, ಗಳಿಕೆಯಲ್ಲಿ ಹೆಚ್ಚಳವಾಗದಿದ್ದಲ್ಲಿ ಲಾಭಾಂಶ ಕಡಿಮೆಯಾಗಬಹುದೆನ್ನಲಾಗಿದೆ. ಪ್ರಸಕ್ತ ಮಾರುಕಟ್ಟೆಯಲ್ಲಿ ಪ್ಯಾಕೇಟ್ ತಯಾರಕರಿಂದ ಭರದ ಖರೀದಿ ನಡೆಯುತ್ತಿದೆಯೆನ್ನಲಾಗಿದೆ.